Regd No BG 155 — ೨೯ — 23—4—1982

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ ನು ಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow ಸ್ಥಾಪಕರು– ಆರಮನೆ ಸಿಂಸ್ಥೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ ಗೋಸಂರಕ್ಷಣೆ ಮಾಡಿ

ರಾಜಪಾಲರ ವರ್ಗಾವಣೆ ವದಂತಿ

ಶ

ಊಹಾಪೋಹ

ಕುತ್ತೊಂದು ರಾಜ್ಯದ ರಾಜ್ಯಪಾಲರಾಗಿ ಶ್ರೀ ಜಯಚಾಮರಾಜ ಒಡಿಯರು ವರ್ಗವಾಗುವ ಸಂಭವವಿದೆಯೆಂಬ ಕೆಲವು ಪತ್ರಿಕೆಗಳ ವಂದಿ ಊಹೆಯಿಂದ ಕೂಡಿದ.ದೆಂದ ಬೆಂಗಳೂರಿನಲ್ಲಿ ವಿವರಿಸಿದೆ ಅಂಥಹ ಪ್ರಯತ್ನ ನನಗೇನೂ ತಿಳಿಯದು ಎಂದು ಅವರು ನುಡಿದರು. ನೀವು ದೆಹಲಿಗೆ ಭೇಟಿಕೊಟ್ಟಾಗ ಈ ವಿಷಯ ಬಂತೆ ಎನ್ನಲು ನಕಾರದ ಉತ್ತರ ವಿತ್ತರು ತಾವು ಅಧಿಕೃತವಾಗಿ ತಿಳಿದಿರುವದು ವೈಸೂರು ರಾಜ್ಯಪಾಲರಾಗಿ ಮುಂದುವರಿಯುವುದು ಎಂದು ಅವರು ಹೇಳಿದರು ನಾನು ವೈಸೂರಿನೊಡನೆ ವೈಸೂರು ಜನರ ಇಚ್ಚೆಯೊಡನೆ ಬೆಳೆದೆ ಎಂದು ಶ್ರೀಮನ್ಮಹಾರಾಜರು ತಿಳಿಸಿದರು

ಆದಿ ಶಂಕರರ ಮುಖ್ಯ ಶಿಷ್ಯ ಸರೇಶ್ವರ ಆಚಾರ್ಯರನ್ನು ಕುರಿತು ತಾವು ಬರೆಯುತ್ತಿರುವ ಪುಸ್ತಕ ವಿಳಿಯ ಕೈಪ್ರತಿ ಬಂದಿದೆ ಎಂದು ಮಹಾರಾಜರು ತಿಳಿಸಿದರು.

ಮಹಾರಾಜರು ನಿನ್ನೆ ವಧ್ಯಾಶ್ರ ವಿದೇಶ ಪ್ರವಾಸಕ್ಕಾಗಿ ಬೆಂಗಳೂರಿನಿಂದ ತೆಳಿದರು ಅವರು ರಷ್ಯಕ್ಕೆ ಭೇಟಿ ಕೊಡುವರು

ಕಡ್ಡಾಯ ಶಿಕ್ಷಣ

ಬರುವ ಶಿಕ್ಷಣ ವರ್ಷದಿಂದ 7 ಮತ್ತು ೫ ವಯಸ್ಸಿನ ಗುಂಪಿನವರಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕ್ರಮ ಜಾರಿಗೆ ತರುವದಾಗಿ ಶಿಕ್ಷಣ ಇಲಾಖೆ ಡೈರೆಕ್ಟರಾದ ಶ್ರೀ ಎ ಸಿ ದೇವೇಗೌಡ ರವರು ನಿನ್ನೆ ಬೆಂಗಳೂರಿನಲ್ಲಿ ತಿಳಿಸಿದರು

೦೦೦

ಹಾಂಡೂರಾಸ್ ಪರ್ವತ ಪ್ರದೇಶದಲ್ಲಿ ವಿಮಾನವೊಂದು ಡಿಕ್ಕಿಬಡಿದು 6 ಮಂದಿ ಅಮೆರಿಕಾ ಪ್ರವಾಸಿಕರು ನಿನ್ನೆ ಮೃಣಹೊಂದಿದರು.

ನೂತನ ಕಟ್ಟಡದ ಉದ್ಘಾಟನೆ

ಮುಖ್ಯ ಮಂತ್ರಿ ಶ್ರೀ ಎಸ್ ಆರ್ ಕಂತಿಯವರು ಕೃಷ್ಣರಾಜನಗರ ಜವಿಮಾನು ಅಡಮಾನ ಸಹಕಾರ ಸಂಘದ ನೂತನ ಕಟ್ಟಡದ ಪ್ರಾರಂಭೋತ್ಸವವನ್ನು ಈ ದಿನ ಬೆಳಿಗ್ಗೆ ನೆರವೇರಿಸಿದರು. ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಸೇವೆ ಸಲ್ಲಿಸಿದ ಮಹನೀಯರ ಭಾವಚಿತ್ರಗಳನ್ನು ವಿಧಾನ ಸಭಾ ಸದಸ್ಯರಾದ ಶ್ರೀ ಡಿ ದೇವರಾಜೇ ಅರಸಿನವರು ನೆರವೇರಿಸಿದರು.

ಪ್ರಧಾನಿಗಳ ಭರವಸೆ

ನಿನ್ನೆ ನವ ದೆಹಲಿಯ ನೇಪಾಳ ರಾಯಭಾರಿ ಕಚೇರಿಯಲ್ಲಿ ದೊರೆ ಮಹೇಂದ್ರರು ಶುಂಬಿದ ಪತ್ರಿಕಾ ಸಂಮೇಳನದಲ್ಲಿ ಮಾತನಾಡುತ್ತಾ, ಎಡದು ದೇಶಗಳಲ್ಲಿ ಉತ್ತಮ ಬಾಂಧವ್ಯಕ್ಕಾಗಿ ಅಗತ್ಯ ಕಾರ್ಯಗಳನ್ನು ಮಾಡುವಬಾಗಿ ತಮಗೆ ಪಂ|| ನೆಹರು ಭರವಸೆ ಕೊಟ್ಟಿರುವರು ಎಂದು ತಿಳಿಸಿದರು.

ಮ್ಯಾಕ್ಮಿಲ್ಲರಿಗೆ ಮನವಿ

ಜಿನೀವಾದಲ್ಲಿ ನಿಶ್ಶಸ್ತ್ರೀಕರಣ ಸಂಮೇಳನ ನಡೆಯುತ್ತಿರುವಾಗ ಅಣು ಪ್ರಯೋಗ ನಡೆಸದಂತೆ ಅಧ್ಯಕ್ಷ ಕೆನೆಡಿಯವಂಲ್ಲಿ ಪ್ರಯತ್ನ ಮಾಡಬೇಕೆಂದು ಕೆನಡಾದ ಪ್ರಧಾನಿ ಡಿರ್ಜೆಬೇಕರರು ಬ್ರಿಟನ್ನಿನ ಪ್ರಧಾನಿ ಮ್ಯಾಕ್ಮಿಲ್ಲರಿಗೆ ತಿಳಿಸಿದ್ದಾರೆ.

ಸಮಿತಿ ರಚನೆ

ದೇಶದ ರಂಫ್ಷನ್ನು ಅಭಿವೃದ್ಧಿಮಾಡಲು ಭಾರತ ಸರ್ಕಾರ ವ್ಯಾಪಾರ ಸಮಿತಿಯೊಂದಂ ರಚನೆ ಮಾಡುವದೆಂದು ದೆಹಲಿ ವಾರ್ತೆಯಿಂದ ಗೊತಾಗಿದೆ.

ವಿವಿಧ ವಿಷಯಗಳು

ಪ ಪಂಚದ ಅಧ್ಯಂತ ಸುಮಾರು ನಾನೂರು ಲಕ್ಷ ಮಂದಿ ಕಮ್ಯೂನಿಸ್ಟರು ಇರುವರೆಂದು ಸರ್ಕಾರಿ ಪ್ರಕಟಣೆ ತಿಳಿಸುವದು ಅ ಪೈಕಿ 360 ಲಕ್ಷ ಮಂದಿ ಕಮ್ಯೂನಿಸ್ಟ ರಾಷ್ಟ್ರಗಳಲ್ಲಿರುವರು. ಇಂಡೋನೇಷಿಯಾದಲ್ಲಿ 17 ವರೆ ಲಕ್ಷ ಕಮ್ಯೂನಿಸ್ಟರಿರುವರು. ಇಟಲಿಯಲ್ಲಿ 15 ಲಕ್ಷ ಕಮ್ಯೂನಿಸ್ಟರು ಇರುವರು. ಬ್ರಿಟನ್ನಿನಲ್ಲಿ 29 ವರೆ ಸಾವಿರ ಕಮ್ಯೂನಿಸ್ಟರಿರುವರು ಭಾರತದಲ್ಲಿ 117501 ಕಮ್ಯೂನಿಸ್ಟರಿರುವರು ಜಪಾನಿನಲ್ಲಿ 80 ಸಾವಿರದಿಂದ 1 ಲಕ್ಷದ ವರಗೆ ಕಮ್ಯೂನಿಸ್ಟರಿರುವರು.

ಭಾರತ–ನೇಪಾಳ ಗಡಿಯಲ್ಲಿರುವ ಜರಾಹಿ ನದಿಯ ಒಟವನ್ನು ಬದಲಾಪಣೆ ಮಾಡುವ ಪಶ್ಚಿಮ ನೇಪಾಳದ ಭೈರವ ರಾಜ್ಯಪಾಲರ ಯೋಜನೆಯನ್ನು ತಡೆಯಬೇಕೆಂದು ಗೋರಖಪುರ ಜಿಲ್ಲೆಯ ಶುಕಿರಿ ಗ್ರಾಮದನಿವಾಸಿಗಳು ಪ್ರಧಾನಿ ನೆಹರು ವಕ್ತು ಉತ್ತರ ಪ್ರದೇಶದ ಮುಖ್ಯ ಮಂತ್ರಿ ಶ್ರೀ ಸಿ. ಬಿ ಗುಪ್ತರನ್ನು ಒತ್ತಾಯ ಮಾಡಿರುವರೆಂದು ನಂಬಲಾಗಿದೆ

ಕಾಶ್ಮೀರ ಪ್ರಶ್ನೆಯ ಮೇಲೆ ನಿರ್ಬಂಧಿತ ಪಂಚಾಯಿತಿಗೆ ಒಪ್ಪಲು ಪಾಕಿಸ್ತಾನ ನಿರ್ಧವಿದೆ ಎಂದು ಪಾಕಿಸ್ತಾನ ವಿದೇಶಾಂಗ ಮಂತ್ರಿ ಮಂಜೂರ್ ಕ್ವಾದಿರ್ ಅವರು ರಾವಲ್ಪಿಂಡಿಯಲ್ಲಿ ತಿಳಿಸಿದ್ದಾರೆ ಕಾಶ್ಮೀರದ ಜನತೆಗೆ ಸ್ವಯಂ, ನಿರ್ಣಯಾತ್ಮಕ ಶಕ್ತಿಯನ್ನು ಒದಗಿಸುವದು ಪಾಕಿಸ್ತಾನದ ಗುರಿ ಆಗಿದೆ ಎಂದು ಅವರು ತಿಳಿಸಿದರು

ದೊರೆ ಮಹೇಂದ್ರ ತೊಡನೆ ಪ್ರಧಾನಿ ನೆಹರು ತೋರಿದ ಸ್ನೇಹಯುತ ಧೋರಣೆಗೆ ವಿರುದ್ಧವಾಗಿ, ಭಾರತದ ಅಧಿಕಾರಿಗಳು ಭಾರತ–ಪಾಕಿಸ್ತಾನದ ಅಧಿಕಾರಿವರ್ಗದ ಜರ್ಜೆಯಲ್ಲಿ ತೋರಿದರೆಂದು ನಿನ್ನೆ ಪಂಜಿ ಖಟಮಂಡುವಿನಲ್ಲಿ ಪತ್ರಿಕೆಗಳು ಪ್ರಕಟಿಸಿವೆ ಈ ಗಿನೆ 2 ರಾಷ್ಟ್ರಗಳ ಭಿನ್ನ ಭಾವನೆಗೆ ಭಾರತದ ಅಧಿಕಾರಿಗಳು ಕಾರಣರೆಂದು ಆ ಪತ್ರಿಕೆಗಳು ಬರೆದಿವೆ.

ವಸ್ತು ತಲಪಲು 33 ವರ್ಷ

ಸ್ಕಾಂತ್ಲಿನ ಅಡ್ವೊಕೇಟಂತಾಗಿದ್ದ ಶ್ರೀ ನಕ್ಷತ್ರಂಅತಾಲ ಜವೇರಿ ಬೊಂಬಾಯಿನ ಅಡ್ವೊಕೇಟಂತಾದ ಶ್ರೀ ರಾವೆ ಶ್ವರ ಸ್ವರೂಪ ಬಿಲರ್ಥರಿಗೆ 1929 ನೆಯ ಜೂನ್ 22 ರಂದು ಕಳಿಸಿದ ರಿಜಿಸ್ಟರು ಪದಾರ್ಥ ಈ ವರ್ಷ ಏಪ್ರಿಲು 6 ರಂದು ತಲುಪಿತು. ಕಳಿಸಿದವರು ಜೀವಂತವಾಗಿಲ್ಲ

★

ಮಹಿಳೆಯರು ವದುವೆ ಮಾಡಿಕೊಂಡರೆ ಅವರು ನೌಕರಿಯನ್ನು ಇಟಲಿ ದೇಶದಲ್ಲಿ ಕಳೆದುಕೊಳ್ಳುತ್ತಿದ್ದರು ಈಗ ರೋಂನಿಂದ ಒಂದ ವಂದಿಯ ಪ್ರಕಾರ ವಿವಾಹ ಮಾಡಿಕೊಂಡರೆ ಅವನ್ನು ನೌಕರಿಯಿಂದ ತೆಗೆಯಕೂಡದು ಈ ಬಗ್ಗೆ ವಿ. ಸೂ ಧಾರಾನೂನನ್ನು ಇಟಲಿ ಸರ್ಕಾರ ರಚಿಸಿದೆ ಕೆಲಸದಿಂದ ವದುವೆ ಆದ ಮಹಿಳೆಯರನ್ನು ತೆಗದರೆ ಅವರಿಗೆ ಮತ್ತೆ ಕೆಲಸ ಕೊಡಬೇಕು. ತೆಗೆದ ಅವಧಿಯ ವೇತನ ಹಾಗೂ ಭತ್ಯೆಗಳನ್ನು ಕೊಡಬೇಕು.

ನವ ದೆಹಲಿಯ ಅಶೋಕ ಹೋಟಲ್ ನಲ್ಲಿ ನಿನ್ನೆ ರಾತ್ರಿ ನೇಪಾಳದ ದೊರೆ ಮಹೇಂದ್ರರು ಭಾರತದ ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಭೋಜನಕೂಟ ವನ್ನೇರ್ಪಡಿಸಿದ್ದರು. ಮಹೇಂದ್ರರು ಭಾಷಣಮಾಡುತ್ತಾ, 2 ದೇಶಗಳಲ್ಲಿದ್ದ ಭಿನ್ನಾಭಿಪ್ರಾಯಗಳು ನಿವಾರಣೆ ಆದವೆಂದು ನಾವು ವಾಪಸಾಗುತ್ತೇವೆ, ಪ್ರಧಾನಿ ನೆಹರುರವರೊಡನೆ ನಡೆದ ಮಾತುಕತೆಗಳು ಸೌಹಾರ್ದದಿಂದ ಇದ್ದವು, ನಮ್ಮ ಸಾಂಪ್ರದಾಯಿಕ ಗೆಳೆತನ ಬಲವಾಗಲಿ ಎಂದರು.

ಭಾರತದಲ್ಲಿ ಪ್ರವಾಸ ಮಾಡಲು ಸಿಂಗ್ಪುರ ಪ್ರಧಾನಿಗಳಾದ ಲಿ ಕುಯಾನ್ ಯುರವರು ನಿನ್ನೆ ರಾತ್ರಿ ರಂಗೂನಿನಿಂದ ನವ ದೆಹಲಿಗೆ ತೆಳೆದರು

ನಾಳೆಯ ಹಂಚಾಂಗ

ಅಸ್ಥಾನ ವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಮ್ ಜೋಯಿಸರಿಂದ

24 ಚೈತ್ರ ಜ್ಯೇಷ್ಠ

ಪ್ರಮುಖ ವೃತ್ತಾಂತಗಳು

ನವದೆಹಲಿ 21— ಲೋಕಸಭೆಯಲ್ಲಿ ಒಬ್ಬ ಸದಸ್ಯರು ತಂದ ಮರಣದಂಡನೆ ರದ್ದಿನ ಪರವಾಗಿ ನಿರ್ಣಯ ಬಗ್ಗೆ ಇನ್ನೂ ಇದಕ್ಕೆ ಸೂಕ್ತಕಾಲವಲ್ಲವೆಂದು ಗೃಹಮಂತ್ರಿಗಳು ಹೇಳಿದರು ಭಾರತದಲ್ಲಿ ಇನ್ನೂ ವರ್ಷಕ್ಕೆ 6000 ಖೂನಿಗಳಾಗುತ್ತಿರುವದೆಂದೂ ಹೇಳಿದರು

ರಾಜ್ಯದ ವಿಧಾನಸಭೆ ಮುಕ್ತ ಪರಿಷತ್ತು ಮೇ 8 ರಿಂದ 3-4 ದಿನಗಳು ನಡೆಯುವದು ; ಶಾಸನಸಭಾಸದರು ಮೇ 7 ರಂದು ರಾಷ್ಟ್ರಾಧ್ಯಕ್ಷ ಚುನಾವಣೆ ಬಗ್ಗೆ ಮತನೀಡುವರು ಎಂದು ಬೆಂಗಳೂರು ವಾರ್ತೆ ತಿಳಿಸುತ್ತದೆ

ಬೆಂಗಳೂರು ನಗರದ ಸ್ಪೇಟ್ ಆಫೀಸುಗಳನ್ನು ಇಡಲು ವಿಧಾನಸೌಧದ ಪಕ್ಕದಲ್ಲಿ 40 ಲಕ್ಷ ರೂ ವೆಚ್ಚದಲ್ಲಿ 7 ಅಂತಸ್ತಿನ ಕಟ್ಟಡ ಕಟ್ಟಲಾಗುವುದು

ನವದೆಹಲಿ 21 — ಲೋಕಸಭೆಯಲ್ಲಿ ಪಿಎಸ್ಪಿ ಸದಸ್ಯ ಪ್ರಿಯ ಗುಪ್ತರು ಇಂಗ್ಲೀಷು ಮತ್ತು ಬಂಗಾಳಿ ಭಾಷೆ ಉಪಯೋಗಿಸಿದಾಗ, ಒಂದೇ ಭಾಷೆಯಲ್ಲಿ ಇಂಗ್ಲೀಷು ಅಥವಾ ಹಿಂದಿಯಲ್ಲಿ ಮಾತನಾಡಲು ಸ್ಪೀಕರರು ತಿಳಿಸಿದರು

ಲಂಡನ್ 21— ಅಮೇರಿಕವು ಪುನಃ ಅಣುಪ್ರಯೋಗವನ್ನು ಕ್ಷಿಪ್ರದಲ್ಲೆ ಫೆಸಿಫಿಕ್ ಸಮುದ್ರದ ಕ್ರಿಸ್ಮಸ್ ದ್ವೀಪದಲ್ಲಿ ಪ್ರಾರಂಭಿಸಬಹುದಾದ್ದರಿಂದ, ಅಲ್ಲಿಗೆ ಹಡಗುಗಳನ್ನು ಕಳಿಸುವಂತೆ ಶಾವು ಭಾರತ ಮತ್ತಿತರ ಏಳು ತಟಸ್ಥ ರಾಷ್ಟ್ರಗಳ ನಾಯಕರಲ್ಲಿ ವಿನಂತಿಸಿರುವುದಾಗಿ ಅಲ್ಡ್ ರಸ್ಸಲ್ ಹೇಳಿದರು ; ಬಲಯುತ ರಾಷ್ಟ್ರಗಳು ಅಂತರರಾಷ್ಟ್ರೀಯ ನ್ಯಾಯವನ್ನು ನಿಷ್ಕರುಣೆಯಿಂದ ಉಲ್ಲಂಘಿಸುತ್ತಿರುವದರಿಂದ ತಾವು ತಟಸ್ಥ ರಾಜ್ಯಗಳಲ್ಲಿ ವಿನಂತಿಸಿರುವುದಾಗಿ ಹೇಳಿದರು

ಇಂಡೋರು 21— ಇಲ್ಲಿನ ರಾವಜೀ ಬಜಾರಿನಲ್ಲಿ ಐದು ಮಂದಿಯು ಒಂದು ಸಂಸಾರದಲ್ಲಿ ಅತ್ಮಹತ್ಯೆ ಒಪ್ಪಂದದಂತೆ ೪ ಮಂದಿ ವಿಷಸೇವನೆಯಿಂದ ಪತ್ತರು ; ಇನ್ನೂ ಉಸಿರಾಡುತ್ತಿದ್ದ 10 ವರ್ಷದ ಹುಡುಗಿಯು ಆಸ್ಪತ್ರೆಗೆ ಸಾಗಿಸಲ್ಪಟ್ಟಳು

ನವದೆಹಲಿ 21— ಪೂರ್ವ ಪಾಕಿಸ್ತಾನ ಕಟ್ಟಬೇಕೆಂದಿರುವ ಕರ್ನಾಫುಲಿ ಅಣೆಕಟ್ಟಿನಿಂದ, ಅಸ್ಸಾಮಿನ ವಿಜೋಚಿಲ್ಲಿಯ ಲಕ್ಷಾಯಿ ಬೆಟ್ಟಗಳಿಗೆ ಅಗುವ ನಷ್ಟ ಕುರಿತು ಭಾರತದಿಂದ ಪಾಕಿಸ್ತಾನಕ್ಕೆ ಎಚ್ಚರಿಸಿದೆ ; ಈ ಕಾರ್ಯವು ಅಂತರರಾಷ್ಟ್ರೀಯ ನ್ಯಾಯ ನಿಯಮಕ್ಕೆ ವಿರುದ್ಧವೆಂದೂ, ಭಾರತ ಈ ಬಗ್ಗೆ ಪ್ರತೀಕಾರದ ಕಾರ್ಯವನ್ನು ರಿಜರ್ವು ಮಾಡಿಕೊಂಡಿದೆಯೆಂದೂ ತಿಳಿಸಲಾಗಿದೆ:

ಬರ್ಮಿಂಗಹಾಂ (ಅಮೇರಿಕ)— ಏಷ್ಯಾದಲ್ಲಿ ಭಾರತ ಮಾತ್ರ ನಿಜವಾದ ಪ್ರಜಾರಾಜ್ಯವೆಂದು ಇಂದಿರಾ ಗಾಂಧಿಯವರು ಇಲ್ಲಿ ತಿಳಿಸಿದರು

ಸೈರೋಬಿ 21— 2000 ಪೌಂಡು ಮೌಲ್ಯದ ಅಕ್ರಮ ಭಂಗಾರ ಹೊಂದಿದ್ದ ಏಕ್ ಇಂಡಿಯಾ ಸ್ಪೇಸ್ ಎಂಜಿನಿಯರು ಡೆನ್ನಿಸ್ ಪೀಟರ್ ಮಾರ್ಷಲ್ಲರಿಗೆ 9 ತಿಂಗಳು ಸಜೆ ವಿಧಿಸಲಾಯಿತು

ಬಾಟಿಮೂಲತ 21— ವಿಶ್ವವಿದ್ಯಾಲಯದ ಪರೀಕ್ಷೆಯಲ್ಲಿ ಕಾಪೀಮಾಡುತ್ತಿದ್ದ ವಿದ್ಯಾರ್ಥಿಯನ್ನು ಹಿಡಿದ ಗುಂಟಾಸಪುರ ಕಾಲೇಜಿನ ಪ್ರೊಫೆಸರ್ ಶುಕ್ಲ ವರಾಂ ಹುಯಿಲ್ಪಟ್ಟು ಪತ್ತನು , ಕೊಲೆಗಡುಕ ತಲೆತಪ್ಪಿಸಿಕೊಂಡಿದ್ದಾನೆ

ಪಂಚಾಂಗ ಸ್ವೀಕಾರ

ಪಯಸ್ವಾಜಿ ರಾವ್ ರಸ್ತೆಯಲ್ಲಿರುವ ನ್ಯೂ ಮಾಡಲ್ ಟೇಲರಿಂಗ್ ಹಾಲ್ ಮಾಲೀಕರಾದ ಶ್ರೀ ಎಂ ಎಲ್ ಶ್ರೀನಿವಾಸರಾಯರು ಕಳುಹಿಸಿರುವ ಶ್ರೀ ಶುಭಕೃತು ಸಂವತ್ಸರದ ಪಂಚಾಂಗವನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ್ದೇವೆ.

ಕ್ಯಾಲೆಂಡರ್ ಸ್ವೀಕಾರ

ಗಾಯುಮೆಟ್ಸ್ ಕೊಳಪರೇಟಿವ್ ಸೊಸೈಟಿಯವರು ಕಳುಹಿಸಿರುವ, ಉಪಯುಕ್ತ ವಿಷಯಗಳಿಂದ ಕೂಡಿರುವ, 1962 ನೇ ಇಸವಿಯ ಅಂದವಾದ ತಿಂಗಳು ಗೋಡೆ ಕ್ಯಾಲೆಂಡರನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ್ದೇವೆ.

ವುಡ್‌ಲ್ಯಾಂಡ್ಸ್ ಪ್ರಶಂಸನೀಯ 11 ನೆ ವಾರ

ಒಂದು ಲಕ್ಷಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸುವ ಅತ್ಯುತ್ತಮ ಚಿತ್ರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— 20-4-62 ರಿಂದ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣಾಂಚಿತ ಚಿತ್ರ] [ದಿನವಹಿ 3 ಆಟಗಳು]

Help The 'Gorakshana'

Advertise in Goraksana and help the pious cause

Mission Accomplished — Astronaut John Glenn

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.